**<u>ಸಾಕ್ಷಿಗೆ ದಿನಾಂಕ 02-02-2026 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ *2* ನೇ ಎದುರುದಾರರ ಪರ ಶ್ರೀ. ಆರ್ ಎಸ್ ಜಿ ವಕೀಲರಿಂದಃ</u>**

1. ನಾನು ಅರ್ಜಿದಾರರಿಗೆ ಮೂಲತಃ ಚಿಕಿತ್ಸೆಯನ್ನು ನೀಡಿದ ವೈದ್ಯನಾಗಿರುವುದಿಲ್ಲ. ಅರ್ಜಿದಾರರಿಗೆ ಚಿಕಿತ್ಸೆ ನೀಡಿದ ವೈದ್ಯರ ಅಭಿಪ್ರಾಯ ಪಡೆದಿರುವುದಿಲ್ಲ. ಅರ್ಜಿದಾರರಿಗೆ ಸಂಬಂಧಿಸಿದ ಕೇಸ್ ಶೀಟ್ ಡಿಸ್ಚಾರ್ಜ್ ಸಮ್ಮರಿಗಳು ಮತ್ತು ಗಾಯದ ಪ್ರಮಾಣ ಪತ್ರ ದಾಖಲೆಗಳನ್ನು ಮಾತ್ರ ನೋಡಿರುತ್ತೇನೆ. ಅರ್ಜಿದಾರರಿಗೆ ಸಂಬಂಧಿಸಿದ ಎಂ ಎಲ್ ಸಿ ರಿಜಿಸ್ಟರ್ ನೋಡಿರುವುದಿಲ್ಲ. ಅರ್ಜಿದಾರರನ್ನು ಅಪಘಾತ ಹೇಗೆ ಆಯಿತು ಎಂದು ವಿಚಾರಿಸಿರುವುದಿಲ್ಲ. ಅರ್ಜಿದಾರರ ಮೂಳೆಮುರಿತ ಕೂಡಿಕೊಂಡಿದೆ ಎಂದರೆ ಸರಿ. ಅರ್ಜಿದಾರರ ಒಳಜೋಡಣೆ ತೆಗೆದಿರುವುದಿಲ್ಲ. ಅರ್ಜಿದಾರರ ಒಳಜೋಡಣೆ ತೆಗೆಯದೇ ಅಂಗನ್ಯೂನತೆ ನಿರ್ಧರಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರ ಒಳಜೋಡಣೆ ತೆಗೆದ ನಂತರ ಚಲನ -ವಲನ ವ್ಯತ್ಯಾಸವಾಗುವುದರಿಂದ ಅಂಗನ್ಯೂನತೆ ಕಡಿಮೆಯಾಗುತ್ತದೆ ಎಂದರೆ ಸರಿಯಲ್ಲ.

2. ಅರ್ಜಿದಾರರು ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ನಂತರ ನಾನು ಪರೀಕ್ಷಿಸುವ ಮಧ್ಯದ ಅವಧಿಯಲ್ಲಿ ಆರೋಗ್ಯ ಸುಧಾರಣೆಯಾಗಿದೆ ಎಂದರೆ ಸರಿ. ಅರ್ಜಿದಾರರಿಗೆ ನಾನು ಪರೀಕ್ಷೆ ಮಾಡಿರುವುದಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಹೇಳಿರುವ ತೊಂದರೆಗಳು ಅರ್ಜಿದಾರರಿಗೆ ಇರುವುದಿಲ್ಲ ಎಂದರೆ ಸರಿಯಲ್ಲ. ನಿಗಧಿತ ಅಂಗಕ್ಕೆ ನೀಡಲಾಗುವ ಶೇಕಡಾ ಪ್ರಮಾಣದ 1/3 ರಷ್ಟು ಭಾಗವನ್ನು ಸಂಪೂರ್ಣ ದೇಹಕ್ಕೆ ಪರಿಗಣಿಸಬೇಕು ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಅನುಕೂಲವಾಗಲೆಂದು ಹೆಚ್ಚುವರಿ ಅಂಗನ್ಯೂನತೆಯನ್ನು ನಿರ್ಧರಿಸಿರುತ್ತೇನೆ ಎಂದರೆ ಸರಿಯಲ್ಲ.

3. ಅರ್ಜಿದಾರರ ವೃತ್ತಿಯ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ಅರ್ಜಿದಾರರು ಕುಳಿತು ಕೆಲಸವನ್ನು ಕಷ್ಟದಿಂದ ಮಾಡಬಹುದು. ಅರ್ಜಿದಾರರ ಒಳಜೋಡಣೆ ತೆಗೆಯಲು

ರೂ.40,000/- ಆಗುತ್ತದೆ ಎಂದು ಅಂದಾಜು ಪಟ್ಟಿ ನೀಡಿರುವುದಿಲ್ಲ. ಒಳಜೋಡಣೆ ತೆಗೆಯಲು ಆಸ್ಪತ್ರೆಯ ವೆಚ್ಚ ಆಸ್ಪತ್ರೆಯಿಂದ ಆಸ್ಪತ್ರೆಗೆ ವ್ಯತ್ಯಾಸವಿರುತ್ತದೆ ಎಂದರೆ ಸರಿ. ಅರ್ಜಿದಾರರನ್ನು ನಾನು ಚಿಕಿತ್ಸೆ ನೀಡದೇ ಇರುವುದರಿಂದ ಅಂಗನ್ಯೂನತೆಯನ್ನು ನಿರ್ಧರಿಸಲು ನಾನು ಸೂಕ್ತ ವ್ಯಕ್ತಿಯಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರ ಸಿಗಲಿ ಎನ್ನುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1ನೇ ಎದುರುದಾರರು ಏಕಪಕ್ಷೀಯ. ಈ ಕಾರಣದಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿರುತ್ತದೆ.**

**ಪಾಟೀ ಸವಾಲುಃ 3ನೇ ಎದುರುದಾರರು ಮತ್ತು ಅವರ ಪರ ವಕೀಲರು ಗೈರುಹಾಜರು. ಈ ಕಾರಣದಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿರುತ್ತದೆ.**

**<u>ಮರು ವಿಚಾರಣೆಃ ಇಲ್ಲ.</u>**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**